ಸಿ.ಸಿ .ನಂ.153/2023                    ಪಿಡಬ್ಲೂಃ 1

ದಿನಾಂಕಃ 20-02-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಮಧ್ಯಂತರ ಅರ್ಜಿ ಮೇರೆಗೆಃ ಆರೋಪಿಯ ಪರವಾಗಿಃ ಶ್ರೀ ಎನ್ ಎ ಮ್ ಎನ್ ವಕೀಲರಿಂದಃ**

15. ಆರೋಪಿ ಅಪರಾ ತಪರಾಗೆ ಸಂಬಂಧಪಟ್ಟಂತೆ ಎಷ್ಟು ಹಣ ಭರಿಸಿದ್ದರು ದಾಖಲಾತಿ ನೋಡಿ ಹೇಳಬೇಕು. ಈಗ ನನಗೆ ನೆನಪಿಲ್ಲ. ಹಿಂದಿನ ಪಾಟೀ ಸವಾಲಿನಲ್ಲಿಯೂ ಇದೇ ಪ್ರಶ್ನೆಯನ್ನು ಕೇಪಳಲಾಗಿತ್ತು ಎಂದರೆ ನೆನಪಿಲ್ಲ. ಆಗಲೂ ಕೂಡ ನಾನು ಎಷ್ಟು ಹಣವನ್ನು ಭರಿಸಿದ್ದಾರೆ ನೆನಪಿಲ್ಲ ಎಂದು ಹೇಳಿರುತ್ತೇನೆ ಎಂದರೆ ಸರಿ . ಸಾಕ್ಷಿ ದಾಖಲೆ ನೋಡಿ ಹೇಳಬೇಕು ಎಂದು ನುಡಿದಿರುತ್ತಾರೆ . ಪಾಟೀ ಸವಾಲು ಪ್ರಾರಂಭವಾದ ನಂತರ ದಾಖಲಾತಿಗಳನ್ನು ನೋಡಿಲ್ಲ . ಆರೋಪಿ ಹಣವನ್ನು ಭರಿಸಿದ ನಂತರ ನಮ್ಮ ಸಂಘದಲ್ಲಿ ಠರಾವು ಪಾಸಾಗಿದೆಯೋ ಇಲ್ಲವೋ ನೆನಪಿಲ್ಲ ನೋಡಿ ಹೇಳಬೇಕು . ಠರಾವು ಆಗಿದೆಯೋ ಇಲ್ಲವೋ ನೋಡಿ ಹೇಳಬೇಕು . ಸಾಮಾನ್ಯವಾಗಿ ಯಾವುದೇ ಹಣ ದುರುಪಯೋಗವಾದಾಗ ಹಾಗೂ ಯಾವುದೇ ರೀತಿಯಲ್ಲಿ ಹಣ ಮರು ಪಾವತಿಯಾದ ಸಂದರ್ಭದಲ್ಲಿ ಠರಾವನ್ನು ಪಾಸು ಮಾಡಬೇಕಾಗುತ್ತದೆ ಎಂದರೆ ಸರಿ . ಈ ಪ್ರಕರಣದಲ್ಲಿ ಠರಾವು ಪಾಸು ಅದ ಬಗ್ಗೆ ನನಗೆ ನೆನಪಿಲ್ಲ . ದಾಖಲಾತಿ ನೋಡಿ ಹೇಳಬೇಕು . ಠರಾವು ಪಾಸು ಆದರೆ ಅದು ನಮ್ಮ ಠರಾವು ಪುಸ್ತಕದಲ್ಲಿ ನಮೂದಾಗಿರುತ್ತದೆ ಎಂದರೆ ಸರಿ . ಠರಾವು ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ತೊಂದರೆ ಇಲ್ಲ. ಅಪರಾ ತಪರಾದಲ್ಲಿ ಹಣವನ್ನು ಮರು ಪಾವತಿ ಮಾಡಿದ ಬಗ್ಗೆ ಸಹಾಯಕ ನಿಬಂಧಕರಿಗೆ ಲಿಖಿತ ಮಾಹಿತಿಯನ್ನು ಕೊಟ್ಟ ಬಗ್ಗೆ ನೆನಪಿಲ್ಲ . ಹಣವನ್ನು ಮರು ಪಾವತಿ ಮಾಡಿ ಎಂದು ಆರೋಪಿಗೆ ಲಿಖಿತ ನೋಟಿಸನ್ನು ಕೊಟ್ಟಿದ್ದೇವೆ. 2020 ರಲ್ಲಿ ನೀಡಿರಬಹುದು, ಇಸವಿ ನೆನಪಿಲ್ಲ. ನೋಟಿಸನ್ನು ಅಧ್ಯಕ್ಷರು ನೀಡಿರುತ್ತಾರೆ. ಇನ್ಸಪೆಕ್ಷನ್ ರಿಪೋರ್ಟನಲ್ಲಿ ಎಷ್ಟು ಹಣ ಬರಬೇಕು ಎಂದು ಬರೆದಿದ್ದಾರೆ ಅಷ್ಟು ಹಣವನ್ನು ನೋಟಿಸಿನಲ್ಲಿ ನಮೂದಿಸಿದ್ದಾರೆ . ನೋಟಿಸಿನ ಕಾಪಿ ನಮ್ಮ ಬಳಿ ಇರುತ್ತದೆ ಎಂದರೆ ಸರಿ . ಸದರಿ

ನೋಟಿಸಿನ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ತೊಂದರೆ ಇಲ್ಲ . ನೋಟಿಸಿನಲ್ಲಿ 22,85,845/- ರೂಪಾಯಿ ಆರೋಪಿಯಿಂದ ಬರುವುದು ಬಾಕಿ ಇದೆ ಎಂದು ಮಂಜುನಾಥ್ಥ ಹನುಮಂತ ನಾಯ್ಕರವರು ಸಾಲ ಮತ್ತು ಬಡ್ಡಿಯನ್ನು ಸೇರಿಸಿ ಲೆಕ್ಕ ಮಾಡಿ ಹೇಳಿ ಎಂದು ಹೇಳಿದ್ದರು . ನಾವು ಲೆಕ್ಕ ಮಾಡಿ ಹೇಳಿದ್ದೇವೆ ಅಷ್ಟು ಅಮೌಂಟ್ ಗೆ ಚೆಕ್ ನ್ನು ಕೊಟ್ಟರು . ಮಂಜುನಾಥ ಹನುಮಂತ ನಾಯ್ಕ ಇವರು ಸಾಲವನ್ನು ಪಡೆಯುವಾಗ ನಮ್ಮ ಸಂಘದಲ್ಲಿ ಸುಮಾರು 20 ವರ್ಷದ ಹಳೇಯ ಸದಸ್ಯರಾಗಿದ್ದರು. ಅದರಲ್ಲಿ 1 ಮತ್ತು 2 ನೇ ಜಾಮೀನುದಾರರು ಕೂಡ ತುಂಬಾ ಹಳೇಯ ಸದಸ್ಯರಾಗಿದ್ದರು . ಯಾವುದೇ ಸಾಲವನ್ನು ಸಂಘದ ಸದಸ್ಯರಿಗೆ ಕೊಡಬೇಕೆಂದು ಕೋ ಆಪರೇಟಿವ್ ಆಕ್ಟನಲ್ಲಿದೆ ಎಂದರೆ ಸರಿ . ಜಾಮೀನುದಾರರು ಕೂಡ ಸಂಘದ ಸದಸ್ಯರಾಗಿದ್ದರೆ ಮಾತ್ರ ಅವರನ್ನು ಜಾಮೀನುದಾರರನ್ನಾಗಿ ಪಡೆದುಕೊಳ್ಳುತ್ತಾರೆ ಎಂದರೆ ಸರಿ . ಆರೋಪಿ ನಮ್ಮ ಸಂಘದ ಸದಸ್ಯ ಅಲ್ಲ ಎಂದರೆ ಸರಿಯಲ್ಲ. ಆರೋಪಿ ನಮ್ಮ ಸಂಘದ ಹಳೇಯ ಸದಸ್ಯರಾಗಿರುತ್ತಾರೆ . ಎಷ್ಟು ವರ್ಷದಿಂದ ಸದಸ್ಯರಾಗಿರುತ್ತಾರೆ ದಾಖಲೆ ನೋಡಿ ಹೇಳಬೇಕು . ಮೆಂಬರ ರಜಿಸ್ಟರ ನೋಡಿದರೆ ಅವರು ಎಷ್ಟು ವರ್ಷಗಳಿಂದ ಸದಸ್ಯರಾಗಿದ್ದಾರೆ ಗೊತ್ತಾಗುತ್ತದೆ. ನಮ್ಮ ಸಂಘ ಬೆಳೆದು ಬಂದ ನಂತರ ನಾವು ಒಟ್ಟೂ ಎಷ್ಟು ಮೆಂಬರಶಿಪ್ ರಜಿಸ್ಟರ್ ಗಳನ್ನು ಮೆಂಟೆನ್ ಮಾಡಿದ್ದೇವೆ ನೆನಪಿಲ್ಲ , ಲೆಕ್ಕ ಮಾಡಿ ಹೇಳಬೇಕು . ಎರಡಕ್ಕಿಂತ ಹೆಚ್ಚು ಮೆಂಬರಶಿಪ್ ರಜಿಸ್ಟರ ಇವೆ . ಆರೋಪಿ ಅಂದಾಜು 15 ವರ್ಷಗಳ ಹಿಂದೆ ಮೆಂಬರಶಿಪ್ ನ್ನು ಪಡೆದಿದ್ದರು. ನಾನು ಕೂಡ ಮೆಂಬರ ಆಗಿದ್ದೇನೆ . ನಮ್ಮ ಸಂಘದ ಎಲ್ಲಾ ನೌಕರರು ಮೆಂಬರಶಿಪ್ ನ್ನು ಪಡೆದಿದ್ದಾರಾ ದಾಖಲಾತಿ ನೋಡಿ ಹೇಳಬೇಕು . 2023 ರ ನಂತರ ನಮ್ಮ ಸಂಘದ ನೌಕರರ ಮೆಂಬರಶಿಪ್ ಮಾಡಿಕೊಂಡಿಲ್ಲ. ಹಳೇಯ ನೌಕರರ ಮೆಂಬರಶಿಪ್ ಇದೆ . ಯಾವುದೇ ನೌಕರರು ಸಂಘದ ಮೆಂಬರಶಿಪ್ ಪಡೆಯಲು ಬರುವುದಿಲ್ಲ ಎಂಬುದು ನಿಯಮ ಎಂದರೆ ಸರಿಯಲ್ಲ . ಸಂಘದ ನೌಕರಸ್ಥರು ಕೂಡ ಯಾವುದೇ ಸಾಲಕ್ಕೆ ಜಾಮೀನುದಾರರಾಗಬಹುದು ಎಂದು ಬೈಲಾದಲ್ಲಿ ಇಲ್ಲ , ಆದರೆ ಸಾಲ ಪಡೆಯಬಹುದು . ಬೈಲಾ ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೇವೆ . ಸಾಕ್ಷಿಗೆ ಕೇಸಿನ ಕಡತವನ್ನು

ತೋರಿಸಲಾಗಿ ಬೈಲಾ ಇಲ್ಲ ಆದರೆ ಸಾಲ ವಿತರಣಾ ನೀಡಿಕೆಯನಿಯಮಾವಳಿ ಹಾಜರು ಪಡಿಸಿದ್ದೇವೆ ಎಂದು ನುಡಿದಿರುತ್ತಾರೆ .

(ಈ ಹಂತದಲ್ಲಿ ಆರೋಪಿ ಪರ ವಕೀಲರ ವಿನಂತಿ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.